ಕನಕಪುರದಲ್ಲಿರುವ ಮಿನಿ ವಿಧಾನಸೌಧ ಕಟ್ಟಡದ ನಿರ್ಮಾಣ

೧೫೫. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನಕಪುರದಲ್ಲಿ ಮಿನಿ ವಿಧಾನಸೌಧ ಕಟ್ಟಡದ ನಿರ್ಮಾಣ ಪೂರ್ಣವಾಗಿದೆಯೇ ಹಾಗೂ ಇದಕ್ಕೆ ತಗುಲಿದ ವೆಚ್ಚವೆಷ್ಟು.

ಆ) ಕಟ್ಟಡ ಪೂರ್ಣವಾಗಿದ್ದಲ್ಲಿ ಇನ್ನೂ ಕಛೇರಿಗಳನ್ನು ಸ್ಥಳಾಂತರಿಸದಿರಲು ಕಾರಣವೇನು.

ಇ) ಈ ಮಿನಿ ವಿಧಾನಸೌಧವನ್ನು ಯಾವಾಗ ಪ್ರಾರಂಭ ಮಾಡಲಾಗಿತ್ತು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಮಿನಿ ವಿಧಾನಸೌಧದ ಕಟ್ಟಡದ ಕೆಲಸ ಪೂರ್ಣವಾಗಿದೆ. ನಿರ್ಮಾಣಕ್ಕೆ ಈವರೆವಿಗೆ ತಗುಲಿದ ವೆಚ್ಚ ೨೫.೭೮ ಲಕ್ಷ ರೂ. ಗಳು.

ಆ) ಮತ್ತು ಇ) ಕಛೇರಿಗಳನ್ನು ಸ್ಥಳಾಂತರಿಸಲು ತುರ್ತು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸ್ವಾಮಿ, ಕಟ್ಟಡ ನಿರ್ಮಾಣವಾಗಿ ೧೫ ತಿಂಗಳು ಆಗಿದೆ. ಪಕ್ಕದಲ್ಲಿರುವ ಬಿ.ಡಿ.ಓ. ಕಛೇರಿಯಲ್ಲಿ, ತಾಲ್ಲೂಕು ಕಛೇರಿಯನ್ನು ನಡೆಸುತ್ತಿದ್ದಾರೆ. ಇದರಿಂದ ಜನಗಳಿಗೆ ತೊಂದರೆಯಾಗಿದೆ. ಕಳೆದ ೧೫ ತಿಂಗಳಿಂದ ರಾಜ್ಯಪಾಲರಿಗೆ ಪತ್ರ ಬರೆದಿದ್ದೇನೆ. ಸುಮಾರು ಮೂರು ಭಾರಿ ಉದ್ಘಾಟನೆ ಮಾಡುವಂಥ ಕಾರ್ಯಕ್ರಮ ಗೊತ್ತು ಮಾಡಿ, ಮುಂದಕ್ಕೆ ಹಾಕಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದು ಉದ್ಘಾಟನೆ ಮಾಡುತ್ತಾರೆಂದು ಒಮ್ಮೆ ಕಾರ್ಯಕ್ರಮ ಗೊತ್ತು ಮಾಡಿದ್ದರೂ ನನಗೆ ತಿಳಿಸಿರಲಿಲ್ಲ. ನನ್ನನ್ನು ಕರೆಯದಿದ್ದರೂ ಪರವಾಗಿಲ್ಲ. ಪಕ್ಕದಲ್ಲಿರತಕ್ಕ ಕಛೇರಿಯನ್ನು ಬದಲಾಯಿಸುವುದಕ್ಕೆ ತುರ್ತು ಕ್ರಮ ತೆಗೆದುಕೊಳ್ಳುತ್ತೀರಾ ? ಈ ವಿಚಾರದಲ್ಲಿ ನಿರ್ದಿಷ್ಟವಾದ ದಿನಾಂಕವನ್ನು ಗೊತ್ತುಮಾಡಿ ತಿಳಿಸುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ, ಮಿನಿ ವಿಧಾನಸೌಧವನ್ನು ೩೧-೫-೧೯೮೯ರಲ್ಲಿ ಪೂರ್ಣಗೊಳಿಸಿ ರೆವಿನ್ಯೂ ಇಲಾಖೆಗೆ ಪಹಿಸಿಕೊಟ್ಟಿದೆ. ಮಾನ್ಯ ಸದಸ್ಯರನ್ನು ಆಮಂತ್ರಿಸಿ ಶೀಘ್ರದಲ್ಲಿ ಕಟ್ಟಡವನ್ನು ಉದ್ಘಾಟನೆ ಮಾಡಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಏಪ್ರಿಲ್ ತಿಂಗಳಲ್ಲಿ ಮಾಡುತ್ತೀರಾ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಆಗಬಹುದು.

ರಾಜ್ಯದಲ್ಲಿರುವ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುವ ರಸ್ತೆಗಳು

೬೯. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ರಸ್ತೆಗಳು ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುವ ಉದ್ದಳತೆ ಎಷ್ಟು.

ಆ) ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಗೆ ಒಳಪಟ್ಟಿರುವ ರಸ್ತೆಗಳ ಉದ್ದಳತೆ ಎಷ್ಟು.

ಇ) ಜಿಲ್ಲಾ ಪರಿಷತ್‌ಗೆ ವಹಿಸಿದ ಮೇಲೆ ರಸ್ತೆಗಳು ಸಂಚಾರಕ್ಕೆ ಯೋಗ್ಯವಿಲ್ಲದಂತೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೧೧೯೯ ಕಿ.ಮಿ. ಉದ್ದ ರಾಜ್ಯ ಹೆದ್ದಾರಿ ಹಾಗೂ ೧೪೦೧೨ ಕಿ.ಮಿ. ಉದ್ದ ಜಿಲ್ಲಾ ಮುಖ್ಯ ರಸ್ತೆಗಳು ರಾಜ್ಯ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿದೆ. ಒಟ್ಟು ಉದ್ದ ೨೯೨೧೧ ಕಿ.ಮಿ.ಗಳು.

ಆ) ೩೧೬೭ ಕಿ.ಮಿ. ಉದ್ದ ಇತರ ಜಿಲ್ಲಾ ರಸ್ತೆಗಳು, ೪೪೫೫೩ಕಿ.ಮಿ. ಗ್ರಾಮಾಂತರ ರಸ್ತೆಗಳು ಹಾಗೂ ೨೬೪೮೨ ಕಿ.ಮಿ. ತಾಲ್ಲೂಕು ಅಭಿವೃದ್ಧಿ ಮಂಡಳಿ ರಸ್ತೆಗಳು ಜಿಲ್ಲಾ ಪರಿಷತ್ತುಗಳ ವ್ಯಾಪ್ತಿಗೆ ಒಳಪಟ್ಟಿದೆ. ಒಟ್ಟು ಉದ್ದ ೭೪೨೩೨ ಕಿ.ಮೀ.ಗಳು.

೫) ರಸ್ತೆಗಳನ್ನ ಜಿಲ್ಲಾ ಪರಿಷತ್ತುಗಳಿಗೆ ವಹಿಸಿದ ಮೇಲೆ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ ಎನ್ನುವುದು ಸರಿಯಲ್ಲ. ಆದರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿನ ಬಹಳ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿಯ ವ್ಯಾಪ್ತಿಗೆ ತೆಗೆದುಕೊಳ್ಳಬೇಕೆಂಬ ಬಹಳ ಬೇಡಿಕೆಗಳು ಸರ್ಕಾರಕ್ಕೆ ಬಂದಿದ್ದು, ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜಗೌಡ —ಈಗ ಜಿಲ್ಲಾ ಪರಿಷತ್ತುಗಳಿಗೆ ವಹಿಸಿದ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ ಎನ್ನುವುದು ಸರಿಯಲ್ಲ ಅಂದರೆ ಯೋಗ್ಯ ರಸ್ತೆ ಎಂದು ಅರ್ಥೈಸಿಕೊಳ್ಳಬೇಕಾಗಿದೆ. ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರತಕ್ಕ ಬಹಳ ರಸ್ತೆಗಳು ಎಂದರೆ ೩,೧೧೦ ಕಿ.ಮಿ. ಉದ್ದ ಬರುತ್ತದೆ, ರಾಷ್ಟ್ರೀಯ ಹೆದ್ದಾರಿ ಜೊತೆಗೆ ಎಂ.ಡಿ.ಆರ್, ಓ.ಡಿ.ಆರ್. ಎಂದು ಏನು ಇದೆ ಆ ರಸ್ತೆಗಳನ್ನು ದುರಸ್ತು ಮಾಡಿದರೆ ಒಳ್ಳೆಯದಾಗುತ್ತದೆ. ಅವೆಲ್ಲವನ್ನೂ ಸರ್ಕಾರದವರೇ ತೆಗೆದುಕೊಂಡು ತಮ್ಮ ಇಲಾಖೆಯಿಂದ ಒಟ್ಟು ೨೯,೬೯೦ ಕಿ.ಮಿ. ಉದ್ದದ ರಸ್ತೆಗಳು ತಮ್ಮ ವ್ಯಾಪ್ತಿಗೆ ಏನು ಬರುತ್ತವೆ ಅಷ್ಟನ್ನು ೧೯೯೦-೯೧ನೇ ಇಸವಿಯಲ್ಲಿ ತಮ್ಮ ಮೇಲ್ವಿಚಾರಣೆಯಲ್ಲಿ ತೆಗೆದುಕೊಳ್ಳಲಿಕ್ಕೆ ತಯಾರಾಗಿದ್ದೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸುಮಾರು ೭ ಸಾವಿರ ಕಿ.ಮೀ. ಉದ್ದದ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಬೇಡಿಕೆಗಳು ನಮ್ಮ ಸರ್ಕಾರಕ್ಕೆ ಶಾಸಕರಿಂದ ಮತ್ತು ಸಾರ್ವಜನಿಕರಿಂದ ಬಂದಿವೆ. ನಮ್ಮಲ್ಲಿ ಶಾಸನ ಬದ್ಧವಾಗಿ ಜಿಲ್ಲಾ ಪರಿಷತ್‌ಗೆ ವಹಿಸಿರತಕ್ಕ ಈ ರಸ್ತೆಗಳನ್ನು ನಾವು ವಾಪಸ್ಸು ಪಡೆಯಬೇಕಾದರೆ ಅದಕ್ಕೆ ಜಿಲ್ಲಾ ಪರಿಷತ್‌ಒಪ್ಪಿಗೆ ಕೊಡಬೇಕಾಗುತ್ತದೆ. ನಾವು ಈಗಾಗಲೇ ಈ ಹಿನ್ನೆಲೆಯಲ್ಲಿ ಬಂದ ಎಲ್ಲಾ ಮನವಿಗಳನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್ ಸದಸ್ಯರಿಗೆ ಕಳುಹಿಸಿ ಅವರಿಂದ ಸಮ್ಮತಿಯನ್ನು ಬಯಸಿದ್ದೇವೆ. ಅವು ಬಂದಾಗ ನಾವು ವಿಚಾರ ಮಾಡಬೇಕಾಗುತ್ತದೆ. ಈ ಬಗ್ಗೆ ನಾವು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ. ಅವರು ಸಮ್ಮತಿಸಿದ ತಕ್ಷಣ ಅವುಗಳನ್ನು ಮೇಲ್ದರ್ಜೆಗೇರಿಸಿ ನಮ್ಮ ಇಲಾಖೆಗೆ ವಹಿಸಿಕೊಳ್ಳುತ್ತೇವೆ.

ಶ್ರೀ ಜಿ. ರಾಜಗೌಡ.—ಜಿಲ್ಲಾ ಪರಿಷತ್‌ಗೆ ವಹಿಸಿರತಕ್ಕ ರಸ್ತೆಗಳನ್ನು ನಾನು ಒಬ್ಬ ಎಕ್ಸ್ ಅಫಿಷಿಯೋ ಮೆಂಬರ್ ಆಗಿ ನೋಡಿದ್ದೇನೆ. ಈ ರೋಜಗಾರ್ ಯೋಜನೆಯಲ್ಲಿ ಮಾಡಿರತಕ್ಕ ಒಂದು ರಸ್ತೆಯೂ ಶುದ್ಧ ಇಲ್ಲ. ಅಲ್ಲಿ ಕೆಲಸ ಮಾಡಿಸಿರತಕ್ಕವರು ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಸರ್ಕಾರ ರಸ್ತೆಯನ್ನು ಶುದ್ಧವಾಗಿ ಮಾಡಿಸಿಲ್ಲವೆಂದು ಸರ್ಕಾರದ ಕಡೆ ಕೈ ತೋರಿಸುತ್ತಾರೆ. ದುಡ್ಡು ತಿನ್ನತಕ್ಕದ್ದು ಯಾರೋ ಕೈ ತೋರಿಸತಕ್ಕದ್ದು ಸರ್ಕಾರದ ಕಡೆ. ಆದ್ದರಿಂದ ದಯವಾಡಿ ಈ ರಸ್ತೆಗಳನ್ನು ತಮ್ಮ ಇಲಾಖೆಗೆ ವಹಿಸಿಕೊಳ್ಳಬೇಕೆಂದು ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ನಿರ್ದಿಷ್ಟವಾದ ಉತ್ತರ ಕೊಡಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಈಗಾಗಲೇ ಅವರಿಗೆ ವಹಿಸಿರುವುದರಿಂದ ಶಾಸನ ಬದ್ಧವಾಗಿ ಪುನಃ ನಾವು ವಾಪಸ್ಸು ತೆಗೆದುಕೊಳ್ಳಬೇಕಾದರೆ ಕಾನೂನನ್ನು ಅನುಸರಿಸಬೇಕಾಗುತ್ತದೆ. ಆ ಕಾನೂನನ್ನು ಅನುಸರಿಸಿ ಶೀಘ್ರವಾಗಿ ಈ ರಸ್ತೆಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಪಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮಂತ್ರಿಗಳು ಇದನ್ನು ವಾಪಸ್ಸು ಪಡೆಯಬೇಕಾದರೆ, ಕಾನೂನು ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ ಎಂದು ಹೇಳಿದರು ಅದು ಅವಶ್ಯಕತೆ ಇಲ್ಲ ಎಂದು ನಾನು ಭಾವಿಸಿದ್ದೇನೆ. ಈಗ ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಇರತಕ್ಕಂಥ ರಸ್ತೆಗಳು ೭೪ ಸಾವಿರ ಕಿಲೋಮೀಟರ್ ಇದೆ. ಪಿ.ಡಬ್ಲ್ಯೂ.ಡಿ. ವ್ಯಾಪ್ತಿಯಲ್ಲಿ ಕೇವಲ ೫೯ ಸಾವಿರ ಕಿಲೋಮೀಟರ್ ಇದೆ. ಅಂದರೆ ಬಹುಭಾಗ ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೇವೆ. ಮಾನ್ಯ ರಾಜೂಗೌಡರು ಹೇಳಿದ ಹಾಗೆ ಆಸೇಕ ಕಡೆಗಳಲ್ಲಿ ರಸ್ತೆಗಳು ಹೋಗಿದ್ದು ದುರಸ್ತಿ ಮಾಡತಕ್ಕ ವ್ಯವಸ್ಥೆಯನ್ನು ಅವರು ಇಟ್ಟುಕೊಂಡಿಲ್ಲ. ಅದಕ್ಕೆ ತಾವು ಎಕ್ಸಿಕ್ಯುಟೀವ್ ಆರ್ಡರ್ ಮಾಡಿ ೧೦ ಕಿಲೋಮೀಟರ್‌ಗೆ ಮೇಲ್ಪಟ್ಟು ಇರತಕ್ಕ, ಅಥವಾ ಯಾವುದೇ ರಸ್ತೆ ೫ ಕಿಲೋಮೀಟರ್ ಆಥವಾ ಅದರ ಮೇಲಿರತಕ್ಕವುಗಳನ್ನು, ಪಿ.ಡಬ್ಲ್ಯೂ.ಡಿ ಅವರು ವಹಿಸಿಕೊಳ್ಳಬಹುದು. ಎಕ್ಸಿಕ್ಯುಟೀವ್ ಆರ್ಡರ್ ಇಷ್ಯೂ ಮಾಡಿದರೆ ನ್ಯಾಚುರಲೀ, ೫ ಕಿಲೋಮೀಟರ್‌ಗಿಂತಲೂ ಕಡಿಮೆ ಇದ್ದರೆ ಅದನ್ನು ಜಿಲ್ಲಾಪರಿಷತ್‌ಗೆ ಕಂಟ್ರಸ್ಟ್ ಮಾಡಬಹುದು. ೫ ಕಿಲೋಮೀಟರ್‌ಗಿಂತಲೂ ಹೆಚ್ಚು ಇದ್ದರೆ ಅದನ್ನು ಪಿ.ಡಬ್ಲ್ಯೂ.ಡಿ. ತೆಗೆದುಕೊಳ್ಳಬೇಕು. ಅದಕ್ಕೆ ತಕ್ಕಂತ ಹಣವನ್ನು ನೀವು ವಿಧೇಯಕ ಮಾಡಿಕೊಂಡು ನೀವೇ ಖರ್ಚು ಮಾಡಬಹುದು. ಇವತ್ತು ಪಿ.ಡಬ್ಲ್ಯೂ.ಡಿ. ನಲ್ಲಿರತಕ್ಕ ಸಿಬ್ಬಂದಿಗೆ ಯಾವ ಕೆಲಸ ಕೂಡ ಇಲ್ಲ. ಅಲ್ಲಿ ಇಂಜಿನಿಯರ್ ಎಕ್ಸಿಕ್ಯುಟೀವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್, ಜೂನಿಯರ್ ಇಂಜಿನಿಯರ್ಸ್ ಇದ್ದಾರೆ. ಆದ್ದರಿಂದ, ದಯವಿಟ್ಟು ಎಕ್ಸಿಕ್ಯುಟೀವ್ ಆರ್ಡರ್ ಮಾಡಿ, ಗವರ್ನಮೆಂಟ್ ಆರ್ಡರ್‌ನಿಂದಲೇ ಮಾಡಬಹುದು. ಕಾನೂನು ತಿದ್ದುಪಡಿ ಮಾಡುವ ಅವಶ್ಯಕತೆ ಇಲ್ಲ. ಇಷ್ಟು ಕಿಲೋ ಮೀಟರ್ ತೆಗೆದುಕೊಳ್ಳಬೇಕು, ತೆಗೆದುಕೊಳ್ಳಬಾರದು ಎಂದು ಆಕ್ಟ್‌ನಲ್ಲಿ ಹೇಳಿಲ್ಲ. ಕೆಲವು ವಿಲೇಜ್ ರೋಡ್ಸನ್ನು ತೆಗೆದು

ಕೊಳ್ಳಬೇಕೆಂದು ಎಲ್ಲಿ ಇದೆ? ಇಷ್ಟು ಕಿ.ಮೀ. ತೆಗೆದುಕೊಳ್ಳಬೇಕೆಂದು ಎಲ್ಲಿ ಇದೆ? ಮೈನರ್ ಇರಿಗೇಷನ್‌ನಲ್ಲಿ above 500 ಎಕರೆ ಅಚ್ಚುಕಟ್ಟು ಇರತಕ್ಕದ್ದು ಪಿ.ಡಬ್ಲ್ಯೂ.ಡಿ.ಗೆ ಹಾಗೂ below 500 ಎಕರೆ ಎಲ್ಲಾ ಜಿಲ್ಲಾಪರಿಷತ್ ನವರಿಗೆ ಕೊಟ್ಟಿದ್ದಾರೆ. ಆದರೆ ಒಂದೂ ರಸ್ತೆ ರಿಪೇರಿ ಆಗಿಲ್ಲ. ೧೦೦ ಎಕರೆ ಅಚ್ಚುಕಟ್ಟು ಇರುವುದಕ್ಕೆ ಮಾತ್ರ ಅವರಿಗೆ ಕೊಡಬೇಕು. ಬಾಕಿಯನ್ನು ನೀವು ವಹಿಸಿಕೊಳ್ಳಬೇಕೆಂದು ಆರ್ಡರ್ ಇಷ್ಯೂ ಮಾಡಿದರೆ ಯಾವ ಅಡ್ಡಿಯೂ ಬರುವುದಿಲ್ಲ. ಅದನ್ನು ತಾವು ಪುನರ್ ಪರಿಶೀಲಿಸಬೇಕು. ಇದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಮಾನ್ಯ ಅಧ್ಯಕ್ಷರೆ, ಆಕ್ಟನ್ನು ತಿದ್ದುಪಡಿ ಮಾಡಬೇಕೆಂದು ನಾನು ಹೇಳಿಲ್ಲ. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜಿಲ್ಲಾಪರಿಷತ್ತುಗಳಿಗೆ ಅಧಿಕಾರಗಳನ್ನು ವಹಿಸಿಕೊಟ್ಟು ಆದನ್ನು ಪುನಃ ವಾಪಸ್ಸು ತೆಗೆದುಕೊಳ್ಳಬೇಕಾದರೆ ಒಂದು ನಾರ್ಮಲ್ ಕೋರ್ಸ್ ಕನ್ವಲ್ಟ್ ಮಾಡತಕ್ಕ ಸೌಜನ್ಯವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಈಗಾಗಲೇ ವಹಿಸಿಕೊಳ್ಳುವುದಕ್ಕೆ ಅವರ ಸಮ್ಮತಿಯನ್ನು ಕೇಳಿದ್ದೀವೆ ಬಹುತೇಕ ಜಿಲ್ಲಾ ಪರಿಷತ್ತಿನವರು ಒಪ್ಪಿದ್ದಾರೆ. ಆದರೆ ಇನ್ನೂ ಕೆಲವರು ನಾವೇ ಮಾಡುತ್ತೀವೆ ನಿಮಗೆ ವಾಪಸ್ಸು ಕೊಡುವುದಿಲ್ಲ ಎಂದು ರಿಸಿಸ್ಟೆಂಟ್ ಮಾಡಿದ್ದಾರೆ. ಇದಕ್ಕೆ ಬೇಕಾದ ಹಣವನ್ನು ಒದಗಿಸಬೇಕೆಂದು ಕೇಳುತ್ತಿದ್ದಾರೆ. ಇದನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಂಡು ಆದನ್ನು ಮಾಡತಕ್ಕದ್ದು ಸಾಧ್ಯ ಆನ್ನಿಸಿದರೂ ಈ ಸಣ್ಣ ವ್ಯತ್ಯಾಸದಿಂದಲೇ ಆಗಿದೆ. ಈಗ ನಮಗೂ ಕೂಡ ಹಣದ ಕೊರತೆ ಇದೆ. ಈ ಒಂದು ಪ್ರಶ್ನೆ ಪರಿಶೀಲನೆಗೆ ಯೋಗ್ಯವಾಗಿದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕನ್ನಡ ಚಿತ್ರರಂಗದ ಬೆಳವಣಿಗೆ

೧೮೪. ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಕಾನೂನು ಮತ್ತು ಸಂ ದೀಯ ವ್ಯವಹಾರಗಳು, ಯೋಜನಾ ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನ್ನಡ ಚಿತ್ರರಂಗದ ಬೆಳವಣಿಗೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಆ) ಕರ್ನಾಟಕದ ಸಂಸ್ಕೃತಿ, ಸಾಹಿತ್ಯ ಉತ್ತಮ ಸಂಭಾಷಣೆ ಇರುವ ಕನ್ನಡ ಚಿತ್ರಗಳಿಗೆ ಮಾತ್ರ ಸಹಾಯಧನ ಪ್ರೋತ್ಸಾಹ ನೀಡುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ?

ಇ) ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನವಿಲ್ಲದಿರುವಾಗ ಕರ್ನಾಟಕದಲ್ಲಿ ಪರಭಾಷಾ ಚಿತ್ರಗಳನ್ನು ರದ್ದುಪಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಎ. ವೀರಪ್ಪ ಮೊಯಿಲಿ, (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನ ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು) —

ಅ) ಕರ್ನಾಟಕದಲ್ಲಿಯೇ ತಯಾರಾದ ಕನ್ನಡ ಚಲನ ಚಿತ್ರಗಳಿಗೆ ಸಹಾಯಧನ ನೀಡುವುದು ಚಿತ್ರೀಕರಣ ಶುಲ್ಕ ರಿಯಾಯಿತಿ, ಶೇಕಡಾ ೫೦ರ ಮನರಂಜನಾ ತೆರಿಗೆ ವಿನಾಯಿತಿ, ಚಲನಚಿತ್ರಗಳಿಗೆ ರಾಜ್ಯ ಪ್ರಶಸ್ತಿ ನೀಡುವುದು, ಪ್ರಶಸ್ತಿ ವಿಜೇತ ಚಿತ್ರಗಳಿಗೆ ಶೇಕಡಾ ೧೦೦ ರಷ್ಟು ಮನರಂಜನಾ ತೆರಿಗೆ ನೀಡುವ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ.

ಆ) ಇಲ್ಲ. ಆದರೆ ಕಲಾತ್ಮಕ ಚಿತ್ರಗಳಿಗೆ ಇತರ ಚಿತ್ರಗಳಿಗಿಂತ ೫೦,೦೦೦.೦೦ ರೂಪಾಯಿಗಳ ಹೆಚ್ಚಿನ ಸಹಾಯಧನ ನೀಡಲಾಗುತ್ತಿದೆ.?

ಇ) ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಗಳನ್ನು ರದ್ದು ಪಡಿಸಿಲ್ಲ. ಅಲ್ಲಿ ಕನ್ನಡ ಚಿತ್ರಗಳು ಹೆಚ್ಚಾಗಿ ಪ್ರದರ್ಶನಗೊಳ್ಳುತ್ತಿಲ್ಲವೆಂಬ ಕಾರಣಕ್ಕಾಗಿ ರಾಜ್ಯದಲ್ಲಿ ಪರಭಾಷಾ ಚಿತ್ರಗಳ ಪ್ರದರ್ಶನವನ್ನು ರದ್ದುಪಡಿಸಲು ಸಾಧ್ಯವಾಗದು.

ಶ್ರೀ ವಾಟಾಳ್ ನಾಗರಾಜ್.— ಕನ್ನಡ ಚಿತ್ರಗಳ ಬೆಳವಣಿಗೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮ ಏನೆಂದರೆ ಕೇವಲ ಶೇಕಡ ೫೦ರಷ್ಟು ತೆರಿಗೆ ವಿನಾಯಿತಿ, ರಾಜ್ಯ ಪ್ರಶಸ್ತಿ ನೀಡಿರುವುದು ಹಾಗೂ ಆ ಚಿತ್ರಗಳಿಗೆ ೧೦೦ರಷ್ಟು ಮನರಂಜನೆ ತೆರಿಗೆ ವಿನಾಯಿತಿ ನೀಡುವುದು ಈ ಮೂರೇ ಈ ಸರ್ಕಾರದ ಕಾರ್ಯಕ್ರಮಗಳು ಈ ಕನ್ನಡ ಚಲನ ಚಿತ್ರಗಳ ಬೆಳವಣಿಗೆಗಾಗಿ ಸಮಗ್ರವಾದ ಯೋಜನೆ ಇಟ್ಟುಕೊಂಡಿದ್ದೀರಾ ಅಥವಾ ದೊಡ್ಡದಾಗಿ ಚಿತ್ರನಗರಿ ಮಾಡತಕ್ಕ ಯೋಜನೆಯಾಗಲೀ ತಮ್ಮಲ್ಲಿ ಏನಾದರೂ ಇದೆಯೇ? ಸರ್ಕಾರವೇ ಒಂದು ಸ್ಟುಡಿಯೋ ಮಾಡಿ ಕನ್ನಡ ಚಿತ್ರರಂಗಗಳಿಗೆ ಆದ್ಯತೆಯನ್ನು